ವಿಷಯ ಸಮಿತಿಗಳ ನಿಯಮಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಲು ನಿಯಮಾವಳಿ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಆ ಕಾರಣ ವಿಧಾನಸಭಾ ನಿಯಮಾವಳಿ ಸಮಿತಿಯು ದಿನಾಂಕ 5-3-96ರಂದು ಸಭೆ ಸೇರಿ ವಿಷಯ ಸಮಿತಿಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ತಿದ್ದುಪಡಿಗಳನ್ನು ತರಲು ಶಿಫಾರಸ್ಸು ಮಾಡಿತು. ಈ ತಿದ್ದುಪಡಿಯಿಂದ ವಿಷಯ ಸಮಿತಿಗಳು ತಮ್ಮ ಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಅನುಕೂಲವಾಗುತ್ತದೆಂದು ಭಾವಿಸುತ್ತೇನೆ. ಹಾಗೂ ಆ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ವರದಿಯನ್ನು ಮಂಡಿಸಲಾಯಿತು)

ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ದಿನಾಂಕ 6ನೇ ಮಾರ್ಚ್ 1996ರಂದೂ ಕರ್ನಾಟಕ ವಿಧಾನ ಪರಿಷತ್ತು "ಬೆಂಗಳೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕ, 1996"ನ್ನು ಯಾವುದೇ ತಿದ್ದುಪಡಿಯಿಲ್ಲದೇ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಚಂದ್ರಶೇಖರರೆಡ್ಡಿ ದೇಶಮುಖಿಮದನ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) : ಮಾನ್ಯ ಉಪಾಧ್ಯಕ್ಷರೇ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ 67ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

SRI J.A. FERNANDES : Sir, I present the Fourteenth Report of the Committee on Papers Laid on the Table.

MR. DEPUTY SPEAKER : Report is presented.

ಶಾಸನ ರಚನಾ ಕಾರ್ಯಕಲಾಪ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

"ಕರ್ನಾಟಕ ವಿಧಾನಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿ."

ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿತರುವ ಬಗ್ಗೆ ಮಂಡಿಸಿದ ವರದಿಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ವಿಷಯ ಸಮಿತಿಗಳಿಗೆ ಕೆಲವು ತಿದ್ದುಪಡಿಯನ್ನು ತರಬೇಕೆಂದು ತೀರ್ಮಾನ ಮಾಡಿ ಸಭಾಧ್ಯಕ್ಷರು ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯು ಕೂಲಂಕುಷವಾಗಿ ಚರ್ಚೆ ಮಾಡಿ ಆ ಒಂದು ವರದಿಯನ್ನು ಇವತ್ತು ಸದನದಲ್ಲಿ ಮಂಡಿಸಿದ್ದೇವೆ. ಈ ಸಮಿತಿಯ ಸದಸ್ಯರೆಲ್ಲರೂ ಇದನ್ನು ಸಮಗ್ರವಾಗಿ ಚರ್ಚೆ ಮಾಡಿದ ಮೇಲೆ ತಮ್ಮ ಸರ್ವಸಮ್ಮತವಾದ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದರಲ್ಲಿ ಏನಿದೆ ಎಂಬುದನ್ನು ಹೇಳಬೇಕೆಂದು ಬಯಸಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇದು ಬೇರೆಯವರಿಗೆಲ್ಲಾ ಗೊತ್ತಾಗಬೇಕಲ್ಲಾ, ನಾವಂತೂ ಇರಲಿಲ್ಲ, ಆ ಮಾತು ಬೇರೆ, ಈಗ ಎಷ್ಟು ಜನ ಸದಸ್ಯರನ್ನು ಕಡಿಮೆ ಮಾಡಿದ್ದೀರಿ. ಏಕೆಂದರೆ ಈ ಸದನದಲ್ಲಿರುವಂತಹ ಎಲ್ಲಾ ಸದಸ್ಯರಿಗೆ ಪ್ರತಿಯೊಂದು ಸಮಿತಿಯಲ್ಲೂ ಒಬ್ಬೊಬ್ಬರು ಒಂದೊಂದು ಸಮಿತಿಯಲ್ಲಿ ಬರುವಂತಹ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ನೀವು ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿದಾಗ ಒಬ್ಬ ಸದಸ್ಯರು ಬಿಟ್ಟು ಹೋಗುವುದು, ಕೆಲವರು ಉಳಿದುಕೊಳ್ಳುವುದು, ಹೀಗೆ ಆಗಬಾರದು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ನಾವು ಅವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಪ್ರತಿಯೊಬ್ಬ ಸದಸ್ಯರೂ ಕೂಡ ಈ ಸಮಿತಿಗಳಲ್ಲಿ ಇರುವಂತಹ ಅವಕಾಶವನ್ನು ಮಾಡಿಕೊಟ್ಟು ಇನ್ನು ಕೆಲವು ಸಮಿತಿಗಳಿಗೆ ಒಬ್ಬ ಸದಸ್ಯರನ್ನು ಹೆಚ್ಚು ಮಾಡುವಂತಹ ಅವಕಾಶವಿದೆ. ಒಂದು ಕಡೆ ಸ್ಟ್ಯಾಟ್ಯೂಟರಿ ಕಮಿಟಿಗಳು ಇವೆ, ಒಂದು ಕಡೆ ಪಬ್ಲಿಕ್ ಅಕೌಂಟ್ಸ್ ಕಮಿಟಿ, ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ, ಇನ್ನೊಂದು ಕಡೆ ಸಬ್ಜೆಕ್ಟ್ ಕಮಿಟಿ ಇದೆ. ಒಂದಲ್ಲ ಒಂದು ಕಡೆ ಅವರು ಕೆಲಸ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಮಾನ್ಯ ಸಭಾಧ್ಯಕ್ಷರೇ ಅಧ್ಯಕ್ಷತೆ ವಹಿಸಿದಂತಹ ಈ ಸಮಿತಿಯ ಈ ವರದಿಗೆ ತಾವು ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಹಿಂದೆ ವಿಷಯ ಸಮಿತಿಗಳಲ್ಲಿ ಐದೇಳು ಜನರು ಇದ್ದರು. ಈಗ ನೀವು ತಿದ್ದುಪಡಿ ತಂದಿರುವಂಥಾದ್ದು ಒಂಭತ್ತು ಜನರನ್ನು

ಅವರು ಏಳು ಜನರು ವಿಧಾನಸಭೆಯಿಂದ ಇಬ್ಬರನ್ನು ವಿಧಾನಪರಿಷತ್ತಿನಿಂದ ಮಾಡಿದ್ದೀರಿ. ಹಿಂದೆ 17 ಜನರು ಇದ್ದಂತಹ ಸಮಿತಿಯಲ್ಲಿ ಈ 9 ಜನರಿಗೆ ಇಳಿಸುವುದಕ್ಕೆ ಏನು ಕಾರಣ? ಇದರಿಂದ ಆದಂತಹ ತೊಂದರೆ ಏನು?

ಶ್ರೀ ಎಂ.ಸಿ. ನಾಣಯ್ಯ : ಮೊದಲು ಸ್ಟಾಂಡಿಂಗ್ ಕಮಿಟಿ ಇತ್ತು, ಅದಾದ ನಂತರ ಸಬ್ಜೆಕ್ಟ್ ಕಮಿಟಿಯಾಯಿತು. ಸಬ್ಜೆಕ್ಟ್ ಕಮಿಟಿಯಲ್ಲಿರುವಂಥವರು ಸ್ಟಾಂಡಿಂಗ್ ಕಮಿಟಿಯಲ್ಲೂ ಇದ್ದರು. ಸ್ಟಾಂಡಿಂಗ್ ಕಮಿಟಿಯಲ್ಲಿದ್ದವರು ಸಬ್ಜೆಕ್ಟ್ ಕಮಿಟಿಯಲ್ಲೂ ಇದ್ದರು. ಈ ರೀತಿಯಾಗಿ ಮೀಟಿಂಗ್‌ಗಳು ನಡೆಯುವಂತಹ ಸಂದರ್ಭದಲ್ಲಿ ಕೋರಂಗಳೇ ಆಗಲಿಲ್ಲ. ಈ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ವಿಧಾನಸಭೆಯಲ್ಲಿರುವ ಒಟ್ಟು ಸದಸ್ಯರ ಸಂಖ್ಯೆಯನ್ನು ಮತ್ತು ವಿಧಾನ ಪರಿಷತ್ತಿನಲ್ಲಿರುವಂತಹ ಒಟ್ಟು ಸದಸ್ಯರ ಸಂಖ್ಯೆಯನ್ನು ತೆಗೆದುಕೊಂಡು ಸ್ಟಾಂಡಿಂಗ್ ಕಮಿಟಿ ಮತ್ತು 15 ವಿಷಯ ಸಮಿತಿಗಳನ್ನು ತೆಗೆದುಕೊಂಡು ಪ್ರತಿಯೊಬ್ಬರೂ ಒಂದೊಂದು ಸಮಿತಿಯಲ್ಲಿ ಇರುವಂತಹ ಅವಕಾಶವನ್ನು ಮಾಡಿದ್ದೇವೆ ಇನ್ನೂ ಕೆಲವು ಸದಸ್ಯರು ಜಾಸ್ತಿಯಾಗುತ್ತಾರೆ. ವಿಧಾನ ಪರಿಷತ್ತಿನಲ್ಲಿರುವಂತಹ 74 ಸದಸ್ಯರು ಮತ್ತು ವಿಧಾನಸಭೆಯಲ್ಲಿರುವಂತಹ 224 ಸದಸ್ಯರು ಈ ಎಲ್ಲಾ ಸದಸ್ಯರಿಗೂ ಅವಕಾಶವನ್ನು ಕೊಡುವಂತಹ ವಿಷಯದಲ್ಲಿ ಸಮಗ್ರವಾದಂತಹ ಚರ್ಚೆ ಮಾಡಿ ಒಂದು ವರದಿಯನ್ನು ಕೊಟ್ಟಿದ್ದೇವೆ. ಯಾರಿಗೆ ಅವಕಾಶವಿಲ್ಲವೆಂದರೆ ಅದು ಓವರ್ ಲ್ಯಾಪಿಂಗ್ ಆಗುತ್ತದೆ. ಅದು ಕೂಡ ಮಾಡಿಯಾಯಿತು. ಕೆಲವು ಜನರು ಎರಡು ಸಮಿತಿಗಳಲ್ಲಿ ಇರುವಂತಹ ಅವಕಾಶವನ್ನು ಪಡೆದುಕೊಳ್ಳುತ್ತಾರೆ. ಅದು ಬೈ ರೊಟೇಷನ್ ಆಗುವಂಥದ್ದನ್ನು ನಾವು ಮಾಡಿದ್ದೇವೆ. ಅಂತಹ ಒಂದು ಪರಿಸ್ಥಿತಿ ಬರುವಂಥಾದ್ದನ್ನು ತಾವು ಹೇಳುತ್ತಿರುವುದು, ಅದು ಬರುವುದಿಲ್ಲ. ಹಿಂದೆ ಯಾವ ರೀತಿ ನಡೆದಿದೆ ಎಂಬುದು ತಮಗೆ ಗೊತ್ತಿದೆ. ಆದುದರಿಂದ ತಾವು ಇದಕ್ಕೆ ಅಂಗೀಕಾರ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಿಯಮ 301ರ ಸಂಬಂಧಪಟ್ಟಹಾಗೆ ವಿಷಯ ಸಮಿತಿಗಳು ಹೊರ ರಾಜ್ಯಗಳಿಗೆ ಅಧ್ಯಯನ ಪ್ರವಾಸದ ಮೇಲೆ ಹೋಗತಕ್ಕದ್ದಲ್ಲ. ಇಲ್ಲಿ ವಿಷಯ ಸಮಿತಿಗಳಿಗೆ ಮಾತ್ರ ಈ ನಿಬಂಧನೆಯನ್ನು ಹಾಕಿ ಉಳಿದ ಸಮಿತಿಗಳಿಗೆ ಈ ನಿಬಂಧನೆ ಇಲ್ಲವಿದ್ದರೆ ಆ ಸಮಿತಿಯಲ್ಲಿರುವವರು ಈ ಸಮಿತಿಯಲ್ಲಿರುವುದಿಲ್ಲ. ಹೀಗಾಗಿ ವಿಷಯ ಸಮಿತಿಯಲ್ಲಿರುವವರಿಗೆ ವಂಚನೆಯಾಗುವುದಿಲ್ಲವೇ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಸಮಿತಿಗಳ ಪರಿಮಿತಿಯನ್ನು ನಾವು ಕೆಲವು ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಲಿಲ್ಲ. ಈ ವಿಷಯ ಸಮಿತಿಗಳು ಬಜೆಟ್ ಆದ ಮೇಲೆ ಅವು ವಿಚಾರ ಮಾಡಿ ಒಂದು ವರದಿಯನ್ನು ಸಲ್ಲಿಸಿದ ಮೇಲೆ ಕೊನೆಗೆ ಆ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಒಂದು ವರ್ಷದ ಅವಧಿಯವರೆಗೆ ಚರ್ಚೆ ಮಾಡುತ್ತವೆ. ಆದರೆ ಈ ವಿಷಯ ಸಮಿತಿಗಳು ಹೊರರಾಜ್ಯಗಳಿಗೆ ಹೋಗುವಂಥಾದ್ದು, ಇದರ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಗಣನೆಗೆ ತೆಗೆದುಕೊಂಡಾದ ಮೇಲೆ ಇದು ಸರಿಯಲ್ಲವೆಂದು ಈ

ವರದಿಯನ್ನು ತಂದಿದ್ದೇವೆ. ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಪ್ರತಿ ವರ್ಷ ಸದಸ್ಯರು ಬದಲಾವಣೆಯಾಗುವಂತಹ ಸಂದರ್ಭದಲ್ಲಿ ಎಲ್ಲಾ ಸದಸ್ಯರಿಗೂ ಹೊರರಾಜ್ಯಗಳಿಗೆ ಹೋಗಲು ಐದು ವರ್ಷಗಳಲ್ಲಿ ಒಮ್ಮೆ ಅವಕಾಶ ದೊರೆಯುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಈಗ ನಾಲ್ಕು ವಾರಗಳಲ್ಲಿ ವರದಿಯನ್ನು ಕೊಡಬೇಕೆಂದೂ ಹೇಳಿದ್ದಾರೆ. ಆದರೆ ನಾಲ್ಕು ವಾರಗಳಲ್ಲಿ ವರದಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಹಿಂದೆ ಏನು ಆಗ್ತಿಂದರೆ ಸದನದಲ್ಲಿ ಎಲ್ಲಾ ಬೇಡಿಕೆಗಳ ಮೇಲೆ ಸುಧೀರ್ಘವಾಗಿ ಚರ್ಚೆಯಾಗುತ್ತಿತ್ತು. ಈಗ ಈ ವಿಷಯ ಸಮಿತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ಬೇಡಿಕೆಗಳ ಚರ್ಚೆ ಸಾಕಷ್ಟು ಪರಿಣಾಮಕಾರಿಯಾಗಿ ಈ ಸದನದಲ್ಲಿ ಆಗುತ್ತಿಲ್ಲ. ಇಲ್ಲಿ ಮುಖ್ಯ ಉದ್ದೇಶವೇನೆಂದರೆ ಈ ವಿಷಯ ಸಮಿತಿಗಳು ವಿವರವಾಗಿ ಸಂಬಂಧಪಟ್ಟ ಇಲಾಖೆಯ ವಿಷಯಗಳನ್ನು ಚರ್ಚೆ ಮಾಡುತ್ತವೆ. ಅವು ಅದರಲ್ಲಿ ಸಾಕಷ್ಟು ಅಸಕ್ತಿಯನ್ನು ವಹಿಸುತ್ತವೆ ಎಂದು ಇದೆ. ಇವತ್ತು ತಮ್ಮ ಅಭಿಪ್ರಾಯದ ಪ್ರಕಾರ ಕೋರಂ ಆಗದೆ ಇರುವಂತಹ ಸಂದರ್ಭಗಳು ಹೆಚ್ಚಾಗಿ ಕಾಣುತ್ತಾ ಇದೆ. ಆದುದರಿಂದ 17 ಜನ ಸದಸ್ಯರನ್ನು 9 ಜನ ಸದಸ್ಯರಿಗೆ ಇಳಿಸುವಂತಹ ಅನಿವಾರ್ಯತೆ ಬಂದಿದೆ ಎಂಬ ಸೂಕ್ಷ್ಮತೆಯನ್ನು ತಾವು ಹೇಳಿದ್ದೀರಿ. ಆ ರೀತಿ ಆದಾಗ ಅಲ್ಲಿ ಸಮಗ್ರವಾಗಿ ಪರಿಣಾಮಕಾರಿಯಾಗಿ ಚರ್ಚೆ ಆಗುತ್ತಿಲ್ಲವೆಂಬುದು ಮೇಲ್ನೋಟಕ್ಕೆ ಕಾಣುತ್ತಾ ಇದೆ. ಹೀಗಾಗಿ ಒಂಭತ್ತು ಜನರು ಸಮಿತಿಯಲ್ಲಿದ್ದು ನಾಲ್ಕು ವಾರಗಳಲ್ಲಿ ವರದಿಯನ್ನು ಕೊಡಬೇಕೆಂದು ಹೇಳಿದರೆ ಸತತವಾಗಿ ನಾಲ್ಕು ವಾರಗಳು ಇಲ್ಲಿ ಕುಳಿತು ಮಾಡುವುದಕ್ಕೆ ಆಗುತ್ತದೆಯೆ? ಹಿಂದೆ ಏನು ಆಗ್ತೋ, ಅದು ಸರಿಯಾಗಿದೆ. ಈಗ ನಾವಾಗಲಿ, ನೀವಾಗಲಿ, ಒಂದು ಇಲಾಖೆಯ ಮೇಲೆ ಚರ್ಚೆ ಮಾಡಿ ಬೇಡಿಕೆಯ ಮೇಲೆ ಇನ್ನೊಂದು ದೃಷ್ಟಿಯಿಂದ ಈ ವಿಷಯ ಸಮಿತಿಯ ವ್ಯವಸ್ಥೆಯೇ ಸರಿಯಾದಂತಹ ಕ್ರಮವಲ್ಲ. ಇದರಿಂದ ಬೇಡಿಕೆಗಳ ಮೇಲೆ ನಡೆಯುವಂತಹ ಚರ್ಚೆಯ ಪ್ರಾಮುಖ್ಯತೆಯೇ ಹೊರಟು ಹೋಗಿದೆ. ಆದರೂ ತತ್ಕಾಲಕ್ಕೆ ನಾವು ಇದನ್ನು ಒಪ್ಪಿಕೊಂಡಿದ್ದೇವೆ. ಇದನ್ನು ಪುನರ್ ಪರಿಶೀಲನೆ ಮಾಡುವಂತಹ ಅಗತ್ಯವೂ ಇದೆ ಎಂದು ನಾನು ಹೇಳುತ್ತೇನೆ. ಆ ದೃಷ್ಟಿಯಿಂದ ಇವತ್ತು ಈ ವಿಷಯ ಸಮಿತಿಗಳು ಸಾಕಷ್ಟು ಸಮಯವನ್ನು ತೆಗೆದುಕೊಂಡು ಇಲಾಖೆಯ ಮೇಲೆ ಸಾಕಷ್ಟು ಪರಿಣಾಮಕಾರಿಯಾಗಿ ಚರ್ಚೆ ಮಾಡುವಂತಹ ಅವಕಾಶವಿಲ್ಲದೆ ಹೋದರೆ ಸುಮ್ಮನೆ ಈ ವಿಷಯ ಸಮಿತಿಗಳನ್ನು ಮಾಡಿ ಏನು ಪ್ರಯೋಜನ? ನಾಲ್ಕು ವಾರಗಳಲ್ಲಿ ವರದಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ನಾಲ್ಕು ವಾರಗಳು ಇಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಆಗುತ್ತದೆಯೆ? ನಮ್ಮಕ್ಷೇತ್ರಗಳಲ್ಲಿ ಕೆಲಸಗಳು ಇರುವುದಿಲ್ಲವೆ? ಬೇರೆ ಸಮಿತಿಗಳಿಗೆ ಹೋಗುವುದು ಇರುವುದಿಲ್ಲವೆ? ಅದಕ್ಕಾಗಿ ನಮ್ಮಪ್ರಭಲವಾದ ವಿರೋಧವಿದೆ. ನಾಲ್ಕು ವಾರಗಳಲ್ಲಿ ವರದಿಯನ್ನು ಕೊಡುವುದಕ್ಕಾಗುವುದಿಲ್ಲ. ಆ ರೀತಿ ಕೊಡದೆ ಇರುವ ಕಾರಣದಿಂದ ಆ ಸಮಿತಿಗಳಲ್ಲಿ ಇಲ್ಲದೆ ಇರುವುದೇ ವಾಸಿ ಆದುದರಿಂದ ದಯಮಾಡಿ ತಾವು ಇನ್ನೊಂದು ಸಾರಿ ಇದರ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಈಗ ನಾಲ್ಕು ವಾರಗಳು ಎಂದು ಇರುವಂಥಾದ್ದು ಹಿಂದೆ ವಿಷಯ ಸಮಿತಿಗಳಲ್ಲಿ ಯಾವ ರೀತಿ ನಿಯಮಗಳನ್ನು ಮಾಡಿತ್ತು, ಒಂದು ತಿಂಗಳು ಎಂದು. ಅದೇ ರೀತಿ 30 ದಿನಗಳಲ್ಲಿ ವರದಿಯನ್ನು ಕೊಡಬೇಕೆಂಬ ನಿಯಮ ಕಡ್ಡಾಯವಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ಪಾರ್ಲಿಮೆಂಟಿನಲ್ಲಿ ಇರುವಂತಹ ವಿಷಯ ಸಮಿತಿಗಳಲ್ಲಿ ಯಾವ ರೀತಿ ಇದೆ ಎಂಬುದು ತಮಗೆ ಗೊತ್ತಿದೆ. ಬಜೆಟ್ ಒಂದು ಸಾರಿಯಾದ ಮೇಲೆ ವಿಷಯ ಸಮಿತಿಗಳು ಮಾಡಿದ ಮೇಲೆ ಅವು within a period of four weeks compulsorily they have to present the report. ಅಂಥಹ ಅನಿವಾರ್ಯ ಪರಿಸ್ಥಿತಿ ಬಂದರೆ, ವಿಷಯಗಳು ಗಂಭೀರತೆ ಎಂದು ಕಂಡು ಬಂದರೆ ಆ ವಿಷಯ ಸಮಿತಿಯ ಅಧ್ಯಕ್ಷರು, ಸಭಾಧ್ಯಕ್ಷರಿಗೆ, ಸಭಾಪತಿಯವರಿಗೆ ತಿಳಿಸಬಹುದು. ಏಕೆಂದರೆ ಈ ವಿಷಯ ಸಮಿತಿಗಳಲ್ಲಿ ಇಲ್ಲಿನ ಶಾಸಕರು 10 ವಿಷಯ ಸಮಿತಿಗಳಿಗೆ ಅಧ್ಯಕ್ಷರಾಗಿರುತ್ತಾರೆ, ಅಲ್ಲಿ ಐದು ವಿಷಯ ಸಮಿತಿಗಳಿಗೆ ಅಧ್ಯಕ್ಷರು ಇರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಕಾಲಾವಕಾಶವನ್ನು ಕೊಡಿ ಎಂದು ಹೇಳುತ್ತಿದ್ದೇವೆ. ಅದನ್ನು ಕೊಡುವುದಕ್ಕೆ ಏನು ತೊಂದರೆ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆಯುವ ಮುಖಾಂತರ ಅಪ್ಪಣೆಯನ್ನು ತೆಗೆದುಕೊಳ್ಳಬಹುದು. ಈ ತಿದ್ದುಪಡಿಯ ಮೊದಲೇ ನಾಲ್ಕು ವಾರಗಳು ಎಂಬುದು ಒಂದು ತಿಂಗಳು ಎಂದು ಇತ್ತು. ಅದರಲ್ಲಿ ಏನೂ ಬದಲಾವಣೆಯನ್ನು ಮಾಡಿಲ್ಲ. ಒಂದು ತಿಂಗಳು ಕೊಡಲೇಬೇಕಾಗುತ್ತದೆ.

10.00 ಎ.ಎಂ.

ಅದನ್ನು ಏನೂ ಬದಲಾವಣೆ ಮಾಡಲಿಲ್ಲ. ನೀವು ಅದನ್ನು ತಿದ್ದುಪಡಿ ತರುವುದಕ್ಕೆ ಮೊದಲೂ ಕೂಡ ಒಂದು ತಿಂಗಳೊಳಗೆ ಕೊಡಲೇ ಬೇಕಾಗಿತ್ತು. ಅಂತಹ ಒಂದು ಪರಿಸ್ಥಿತಿ ಬಂದಾಗ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದರೆ, ಅಧ್ಯಕ್ಷರು ಪರಿಶೀಲನೆ ಮಾಡಬಹುದು.

ಶ್ರೀ ಯು.ಜಿ. ಬಣಕಾರ್ : ಮಂತ್ರಿಗಳು ಹೇಳಿದ ಹಾಗೆ ಈ ಒಂದು ತಿದ್ದುಪಡಿಯಾಗುವುದಕ್ಕಿಂತ ಪೂರ್ವದಲ್ಲಿ ಆ ಒಂದು ಸೌಲಭ್ಯವಿತ್ತು. ಮಾನ್ಯ ಅಧ್ಯಕ್ಷರಿಗೆ ಪತ್ರವನ್ನು ಬರೆದು ನಾವು ಸಮಯವನ್ನು ಕೇಳಬಹುದಾಗಿತ್ತು. ಆದರೆ ಈಗ ಅವರು ಕೇಳತಕ್ಕದ್ದಲ್ಲವೆಂದು ನಿರ್ದಿಷ್ಟಗೊಳಿಸಿದ್ದರಿಂದ ಅಧ್ಯಕ್ಷರೆ, ನಾವು ಇದನ್ನು ಕೇಳುವುದಕ್ಕೂ ಬರುವುದಿಲ್ಲ, ಮಾನ್ಯ ಅಧ್ಯಕ್ಷರು ಅದರ ಬಗ್ಗೆ ಕೊಡುವುದಕ್ಕೂ ಸಾಧ್ಯವಿಲ್ಲ. ಆದುದರಿಂದ ಈಗ ನಾಲ್ಕು ವಾರವೆಂದು ನಿಗದಿ ಮಾಡಲಾಗಿದೆ, ಉದಾಹರಣೆಗೆ ಹದಿನೈದನೇ ವಿಷಯದಲ್ಲಿ ಸಾರಿಗೆ, ಗೃಹ ಒಳಾಡಳಿತ ಖಾತೆ ಇದೆ. ಆ ವಿಷಯದಲ್ಲಿ ಸುಮಾರು ಏಳೆಂಟು ಇಲಾಖೆಗಳು ಸೇರಿರುವುದರಿಂದ ಅಧ್ಯಕ್ಷರೆ, ನಾವು ಒಂದು ತಿಂಗಳಲ್ಲಿ ನಾಲ್ಕೈದು ಸಭೆಗಳನ್ನು ಮಾಡಿದರೂ ಸುಧೀರ್ಘವಾಗಿ ಈ ಬಗ್ಗೆ ವಿಚಾರ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ದಯವಿಟ್ಟು, ನಾಲ್ಕು ವಾರ ಇರಲಿ, ಅದರ

ಸಂದರ್ಭ ಬಿದ್ದಾಗ ಆದಕ್ಕೆ ಹಚ್ಚಿನ ಕಾಲಾವಕಾಶಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದೆನ್ನುವುದು ನನ್ನ ಭಾವನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಇದರ ಪರಿಸ್ಥಿತಿ ಯಾವ ರೀತಿ ಬರುತ್ತದೆಂದು ಒಂದು ವರ್ಷ ನೋಡೋಣ. ಮುಂದೆ ಏನಾದರೂ ಅನಿವಾರ್ಯವಾಗಿ ನಾಲ್ಕು ವಾರಗಳು ಸಾಕಾಗುವುದಿಲ್ಲವೆಂದು ಹೇಳುತ್ತಿರುವುದು ಗಮನಕ್ಕೆ ಬಂದಾಗ, ನಮ್ಮ ಸದನ ತಾನೇ ನಾವೇ ನಮ್ಮನಿಯಮಗಳನ್ನು ರೂಪಿಸಿಕೊಳ್ಳೋಣ. ಆ ಒಂದು ಅಧಿಕಾರವನ್ನು ಯಾವಾಗಲಾದರೂ ಪಡೆದುಕೊಳ್ಳಬಹುದು. ಮಾಡೋಣ ಕಾಗೋಡು ತಿಮ್ಮಪ್ಪನವರೇ ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿದೆ, ಈ ವಿಷಯ ಸಮಿತಿಗಳು ಬರುವುದಕ್ಕೆ ಮುಂಚೆ ಹಿಂದಿನ ವರ್ಷಗಳಲ್ಲಿ ಕನ್ನಡ ಇಲಾಖೆಯ ಡಿಮಾಂಡ್‌ಗಳನ್ನು ನಾವು ಇಲ್ಲೇ ಸೇರಿಕೊಂಡು ಒಂದೊಂದು ದಿವಸಕ್ಕೆ ಎರಡು-ಮೂರನ್ನು ನಾವು ಚರ್ಚೆ ಮಾಡಿ ಮುಗಿಸಿರುವುದು ಚರ್ಚೆಯಲ್ಲಿ ಸಕ್ರೀಯವಾಗಿ ಮಾಡಬೇಕೆನ್ನುವುದಾದರೆ, ನಾವೂ ಕೂಡ ಹಿಂದೆ ಈ ರೀತಿ ಮಾಡಿದ್ದೇವೆ. ಇದನ್ನು ವಿಷಯ ಸಮಿತಿಯ ಮುಖಾಂತರ ಮಾಡುವುದಕ್ಕಿಂತ ಸದನದಲ್ಲೇ ಈ ಬೇಡಿಕೆಗಳನ್ನು ಚರ್ಚೆ ಮಾಡುತ್ತಿದ್ದಂತಹ ಹಿಂದಿನ ಪರಿಪಾಠವನ್ನು ತನ್ನಿ ಎಂದು ಕೆಲವು ಜನ ಸದಸ್ಯರು ಹೇಳಿದರು. ಈಗ ಈ ಒಂದು ವರ್ಷ ನೋಡೋಣ. ನಂತರ ಮತ್ತೆ ನಿಮ್ಮ ಸಲಹೆಯಂತೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ, ಇದರಲ್ಲಿ ಇನ್ನೊಂದನ್ನು ಮಾಡಿದ್ದಾರೆ. ಅದೇನೆಂದರೆ, ಅಧ್ಯಕ್ಷರು ಹಾಗೂ ಸಭಾಪತಿಗಳು ನಿರ್ದಿಷ್ಟಪಡಿಸಿದ ಸ್ಥಳದಲ್ಲೇ ಸಭೆಗಳನ್ನು ನಡೆಸಬೇಕೆಂದಿದೆ. ಈಗ ಇನ್ನು ಮುಂದೆ ವಿಷಯ ಸಮಿತಿಗಳು ರಾಜ್ಯದ ಹೊರಗೆ ಹೋಗುವುದಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರಿ, ಅದಕ್ಕೆ ನನ್ನ ಒಪ್ಪಿಗೆಯೂ ಇದೆ. ಬೇಡ, ಅಲ್ಲಿಗೆ ಹೋಗತಕ್ಕಂಥ ಅಗತ್ಯವಿಲ್ಲ. ಈಗ ನಾವು ರಾಜ್ಯದ ಒಳಗಡೆ ಪ್ರವಾಸ ಮಾಡತಕ್ಕಂಥ ಸಂದರ್ಭದಲ್ಲಿ, ಅಲ್ಲಿಗೆ ಹೋದಾಗ ಸಭೆಯನ್ನು ಮಾಡಬಾರದೆಂದು ಹೇಳಿದರೆ, ಹಾಗಾದರೆ ನಾವು ಏತಕ್ಕಾಗಿ ಹೋಗಬೇಕು?

SRI M.C. NANAIAH : With the permission of the Speaker or the Chairman you have got powers to do. These are all some of the inherent powers of the Speaker and the Chairman. You cannot take it away.

SRI KAGODU THIMMAPPA : This power is conferred by this House. Without this, no Chairman, no Speaker can exercise the power.

ಶ್ರೀ ಎಂ.ಸಿ. ನಾಣ್ಯಯ್ಯ : ಕಾಗೋಡು ತಿಮ್ಮಪ್ಪನವರೇ, ಈಗ ನಾವು ಮಾಡಿರತಕ್ಕಂಥ ಸೂಕ್ಷ್ಮತೆಯನ್ನು ತಿಳಿದುಕೊಳ್ಳಿ. ನಿಮಗೆ ಗೊತ್ತಿಲ್ಲವೆಂದಲ್ಲ, ನಿಮಗೆಲ್ಲಾ ಗೊತ್ತಿದ್ದುಕೊಂಡು ಈ ರೀತಿ ಮಾತನಾಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲ, ಈಗ ನಾನೇ ಒಂದು ಸಮಿತಿಯಲ್ಲಿದ್ದವನು ಜೀದರ್‌ಗೆ ಹೋಗಿದ್ದೆವು.

ಶ್ರೀ ಎಂ.ಪಿ. ನಾಣಯ್ಯ : ನೀವೇ ಅಧ್ಯಕ್ಷರಾಗಿದ್ದಿರಿ, ಈ ಹಿಂದೆ ನೀವು ಯಾವ ರೀತಿ ಮಾಡಿದ್ದೀರಂದು ನನಗೆ ಗೊತ್ತಿಲ್ಲವೇ? ಆ ರೀತಿಯ ಒಂದು ಪರಿಸ್ಥಿತಿ ಬರಲೆ ಎಂದು ಹೇಳುತ್ತಾ ಇರತಕ್ಕಂಥವರು ನೀವು ನಿರ್ಣಯಗಳನ್ನು ಮಾಡಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಈ ವಿಷಯ ಸಮಿತಿಯ ಪದ್ಧತಿಯನ್ನು ತರುವಾಗ ನಮಗೆ ಸರಿಯಾಗಿ ತಿಳಿದಿರಲಿಲ್ಲ. ಈ ವ್ಯವಸ್ಥೆ ಕೇರಳದಲ್ಲಿ ಇತ್ತೆಂದು ಏನೋ ಇವರು ಗದಿಬಿಡಿಯಲ್ಲಿ ತಂದರು. ವಿರೋಧ ಪಕ್ಷದಲ್ಲಿರುವವರು ನಾವಲ್ಲಾ ಆ ಕಡೆ ಕೆಲಸ ಮಾಡಿದಾಗ ಬೇಡಿಕೆಗಳು ಚರ್ಚಿಯಾಗತಕ್ಕಂಥ ಕಾಲದಲ್ಲಿ ಸರ್ಕಾರ ಎಷ್ಟು ಅಲರ್ಟ್ ಆಗುತ್ತಿತ್ತು, ಸರ್ಕಾರ ಅದರ ಬಗ್ಗೆ ಎಷ್ಟು ಲಕ್ಷ ಕೊಡುತ್ತಿತ್ತು ಅಷ್ಟು ಪ್ರಮಾಣದಲ್ಲಿ ಇವತ್ತು ಆಗುತ್ತಿಲ್ಲವೆನ್ನುವುದನ್ನು ತಾವು ಗಮನಿಸಬೇಕು.

ಶ್ರೀ ಎಂ.ಪಿ. ನಾಣಯ್ಯ : ಅದಕ್ಕೋಸ್ಕರ ಇದನ್ನು ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಹಿರಿಯ ಶಾಸಕರು. ನಾನು ಹೊಸದಾಗಿ ಹೇಳಬೇಕಾದ್ದಿಲ್ಲ. ಹಿಂದ ಬೇಡಿಕೆಯ ಮೇಲೆ ಚರ್ಚಿಯಾಗತಕ್ಕಂಥ ಕಾಲದಲ್ಲಿ ಸರ್ಕಾರಕ್ಕೆ ಇದ್ದಂಥ ಜವಾಬ್ದಾರಿ ಇವತ್ತು ಕಂಡುಬರುತ್ತಿಲ್ಲ.

+ ಶ್ರೀ ವಿ.ಎಸ್. ಕೌಜಲಗಿ : ಸಭಾಧ್ಯಕ್ಷರೆ, ಈ ವಿಷಯ ಸಮಿತಿಗಳ ಬಗ್ಗೆ ಬಹಳ ಉಹಾಪೋಹ ನಡೆಯುತ್ತಿದೆ. ನಾನು ಸುಮಾರು ಇಪ್ಪತ್ತೆರಡು ವರ್ಷ ಈ ಸದನದ ಸದಸ್ಯನಾಗಿ ಕೆಲಸ ಮಾಡುವ ಸಮಯದಲ್ಲಿ ನೋಡಿದ್ದೇವೆಂದರೆ ವಿಷಯಗಳು ಸದನದಲ್ಲಿ ಯಾವ ರೀತಿ ಚರ್ಚೆಗೆ ಒಳಪಡುತ್ತದೆ, ಆಯಾ ಇಲಾಖೆಯ ಬೇಡಿಕೆಯ ಮೇಲೆ ಯಾವ ರೀತಿ ಚರ್ಚೆಗೆ ಹೋಗುತ್ತವೆ, ಯಾವ ಸ್ವರೂಪವನ್ನು ಪಡೆದುಕೊಳ್ಳುತ್ತವೆ, ಇದನ್ನು ಅಧ್ಯಯನ ಮಾಡುವುದಕ್ಕೆ ಸಾಕಷ್ಟು ಸಮಯ ಸದಸ್ಯರಿಗೆ ಇಲ್ಲಿ ಸಿಗುವುದಿಲ್ಲ. ಕೇವಲ ಹತ್ತು-ಹದಿನೈದು ಸದಸ್ಯರು ಒಂದೊಂದು ವಿಷಯ ಸಮಿತಿಯ ಮೇಲೆ ಸಂಪೂರ್ಣವಾಗಿ, ವಿವರವಾಗಿ ಚರ್ಚೆ ಮಾಡಿ, ನಮ್ಮ ಏನು ಆಯವ್ಯಯದ ಮೇಲೆ ಕೆಲವು ಸೂಚನೆಗಳನ್ನು ವಿತನೆದಿ ಫ್ರೇಮವರ್ಕ್ ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಸಲಹೆ ಕೂಡಬೇಕೆಂದು ತಿಳಿದುಕೊಂಡು ವಿಷಯ ಸಮಿತಿಗಳನ್ನು ಮಾಡಿದರು. ಇದನ್ನು ಇಲ್ಲಿ ಮಾಡುವುದಕ್ಕಿಂತ ಪೂರ್ವದಲ್ಲಿ ಕೇರಳದಲ್ಲಿ ಮತ್ತು ಪಶ್ಚಿಮ ಬಂಗಾಳದಲ್ಲಿ ವಿಷಯ ಸಮಿತಿಗಳು ಯಾವ ರೀತಿಯಾಗಿ ಕೆಲಸ ಮಾಡುತ್ತಿವೆಯೇ ಎನ್ನುವುದನ್ನು ಸ್ವತಃ ನಾನು, ಛೇರ್ಮನ್ ಮತ್ತು ಹಿರಿಯ ಸದಸ್ಯರು ಹೋಗಿ ಅಧ್ಯಯನ ಮಾಡಿಕೊಂಡು ಬಂದು ಇಲ್ಲಿ ನಮ್ಮ ರಾಜ್ಯದಲ್ಲಿ ಅದನ್ನು ಅನುಕರಣೆಗೆ ತಂದೆವು. ಆದರೆ ದುರ್ದೈವ ವಶಾತ್ ಏನಾಗುತ್ತಿದೆ ಎಂದರೆ, ನಾವು ಹಾಕಿಕೊಟ್ಟಂಥ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ನಾವು ವಿಷಯ ಸಮಿತಿಯಲ್ಲಿ

ಆಯವ್ಯಯದ ಮೇಲೆ ಏನಿದೆ ಅದನ್ನು ಚರ್ಚೆ ಮಾಡಬೇಕೇ ಹೊರತು ನಾವು ನಮ್ಮ ಹದ್ದನ್ನು ಮೀರಿ ಹೋಗುವುದರಿಂದ ಏನಾಗುತ್ತಿದೆ ಎಂದರೆ, ಆ ಚರ್ಚೆಗೆ ಸರಿಯಾದ ಮಹತ್ವ ಬರುವುದಿಲ್ಲ. ಮತ್ತು ಏನು ನಾಲ್ಕುವಾರ ಅಥವಾ ಮೂವತ್ತು ದಿವಸವೆಂದು ನಿಗದಿಪಡಿಸಿದ್ದೇವೆ, ಸದಸ್ಯರು ತ್ರಾಸ ತೆಗೆದುಕೊಂಡು ಕುಳಿತುಕೊಂಡು ಅದರ ಬಗ್ಗೆ ಚರ್ಚೆ ಮಾಡಿ ಪರಿಪೂರ್ಣವಾದ ವರದಿಯನ್ನು ಕೊಡಬೇಕು. ಕಳೆದ ಸಲ ಏನಾಯಿತೆಂದರೆ, ಮೊದಲನ ಸಾರಿ ವಿಷಯ ಸಮಿತಿ ರಚನೆಯಾಗಿದೆ ಎಂದು ಅಥವಾ ಸರ್ಕಾರ ಬದಲಾವಣೆಯಾಗಿದೆ ಎಂದು ತಿಳಿದುಕೊಂಡು ಹೆಚ್ಚು ಅವಧಿಯನ್ನು ಬೇಡಿದ ನಂತರ ಸಮಯವನ್ನು ಕೊಟ್ಟರು. ಅದರಲ್ಲಿ ಏನೂ ತಪ್ಪಿಲ್ಲ. ಆದರೆ ನಿರ್ದಿಷ್ಟ ಪಡಿಸಿದ ಅವಧಿಯಲ್ಲಿ ಸದನಕ್ಕೆ ನಮ್ಮ ವರದಿಯನ್ನು ಕೊಡಲೇಬೇಕು ಎನ್ನುವುದು ಒಂದು. ಎರಡನೆಯದು, ಇನ್ನು ಪ್ರವಾಸದ ಬಗ್ಗೆ ಸಂಬಂಧಿಸಿದ್ದು. ಹೊರರಾಜ್ಯಗಳಿಗೆ ವಿಷಯ ಸಮಿತಿಗಳು ಪ್ರವಾಸ ಹೋಗುವಂತಹ ಅವಶ್ಯಕತೆ ಇದೆ ಎಂದು ನನಗೂ ಏನೂ ಅನ್ನಿಸುತ್ತಿಲ್ಲ. ಆದರೆ ರಾಜ್ಯದೊಳಗೆ ಹೋಗಿ ನೋಡುವಂತಹ ವ್ಯವಸ್ಥೆಯನ್ನು ಮಾಡಲೇ ಬೇಕಾಗುತ್ತದೆ. ಈ ವಿಷಯ ಸಮಿತಿಯ ಸದಸ್ಯರು ಆಯವ್ಯಯದ ಬಗ್ಗೆ ಮತ್ತು ಪರಿಪೂರ್ಣವಾದ ಮಾಹಿತಿಯನ್ನು ಕೊಟ್ಟ ನಂತರ, ಎಲ್ಲಿ ಕೆಲಸ ಸರಿಯಾಗಿ ನಡೆಯುತ್ತಿದೆ ಅಥವಾ ಏನು ತೊಂದರೆ ಇದೆ ಎಂದು ಹೋಗಿ ನೋಡುವುದರಲ್ಲಿ ತಪ್ಪೇನೂ ಇಲ್ಲ. ಅಧ್ಯಕ್ಷರ ಅಪ್ಪಣೆಯ ಮೇರೆಗೆ ರಾಜ್ಯದ ಒಳಗಡೆ ಹೋಗುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಹೊರರಾಜ್ಯಗಳಿಗೆ ಹೋಗಿ ನೋಡುವಂತಹದ್ದು ಏನಿಲ್ಲ. ಅದಕ್ಕೆ ಹೊರರಾಜ್ಯಗಳಿಗೆ ಹೋಗುವುದಕ್ಕಿಂತ ನಾವು ರಾಜ್ಯದೊಳಗೆ ತಿರುಗಾಡಿ ಸದನಕ್ಕೆ ಸರಿಯಾಗಿ ಮಾಹಿತಿಯನ್ನು ಕೊಡಬೇಕೆನ್ನುವುದು ಒಂದು. ಆಮೇಲೆ ಈ ಸಮಿತಿಗಳ ಸಭೆ ಎನಿದೆ, ನಾವು ಸಮಿತಿಯವರು ವರದಿಯನ್ನು ಕೊಟ್ಟನಂತರ ತಿಂಗಳಿನಲ್ಲಿ ಮೂರು ಅಥವಾ ನಾಲ್ಕು ಸಭೆಗಳನ್ನು ಮಾಡುವ ಅವಶ್ಯಕತೆಯಿಲ್ಲ. ಇದರ ಬಗ್ಗೆ ನನಗೆಯೇ ಸ್ವಲ್ಪ ಮನಸ್ಸಿನಲ್ಲಿ ಬೇದವಿದೆ. ನಾವು ಕೊಟ್ಟಂಥ ವರದಿ ಯಾವ ರೀತಿ ಸರಿಯಾಗಿ ಕಾರ್ಯರೂಪದಲ್ಲಿ ಬರುತ್ತಿದೆಯೇ ಎಂದು ನೋಡುವುದಕ್ಕೆ ತಿಂಗಳಿನಲ್ಲಿ ಒಂದು ಸಭೆಯನ್ನು ಕರೆಯುವುದಕ್ಕೆ ಅಡ್ಡಿಯಿಲ್ಲ. ತಿಂಗಳಿನಲ್ಲಿ ಒಂದು ಸಭೆ ಮಾಡಿದರೆ ಪರವಾಗಿಲ್ಲವೆಂದು ನಾನು ಮಾನ್ಯ ಅಧ್ಯಕ್ಷರಿಗೆ ಸಲಹೆ ಮಾಡಿದೆ. ಅದಕ್ಕೆ ಕೆಲವನ್ನು ಅಧ್ಯಕ್ಷರು ಬದಲಾವಣೆ ಮಾಡಿದ್ದಾರೆ, ಅದಕ್ಕೆ ಅಡ್ಡಿ ಇಲ್ಲ. ನಾವು ಹೆಚ್ಚು ವಿಷಯವನ್ನು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸಾಕಷ್ಟು ಜನ ಈ ಕಡೆಯಿರುವ ನನ್ನ ಸ್ನೇಹಿತರೂ ಸಹ ಇದರ ಬಗ್ಗೆ ವಿರೋಧವನ್ನು ವ್ಯಕ್ತ ಮಾಡಿದ್ದಾರೆ. ಅಂದರೆ ವಿಷಯ ಸಮಿತಿ ಬೇಡ. ನಾವು ಇಲ್ಲೇ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ವಿಷಯ ಸಮಿತಿಯಲ್ಲಿ ಆಸಕ್ತಿವಹಿಸಿ ಪಾಲ್ಗೊಂಡರೆ ಅದರಿಂದ ಬಹಳ ಪ್ರಯೋಜನವಾಗುತ್ತದೆ. ಕೇವಲ ನಾವು ಆ ವಿಷಯ ಸಮಿತಿ ಹಾಗೆ ಹೀಗೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇವತ್ತು ಪತ್ರಿಕೆಯಲ್ಲಿ ವಿಷಯ ಸಮಿತಿಯ ಬಗ್ಗೆ ಓದಿ ನನ್ನ ಮನಸ್ಸಿಗೆ ಬೇದವೆನಿಸುತ್ತದೆ. ವಿಷಯ ಸಮಿತಿಯ ಬಗ್ಗೆ ಅದರಲ್ಲಿ ಏನೋ ಒಂದು ವರದಿ ಬಂದಿದೆ. ಈ ವಿಷಯ ಸಮಿತಿಗಳ ಬಗ್ಗೆ ನಾವು ಇಷ್ಟು ಲಘುವಾಗಿ ಮಾತನಾಡುವುದು ನನಗೆ ಸರಿ ಅನ್ನಿಸುವುದಿಲ್ಲ. ಏಕೆಂದರೆ, ವಿಷಯ

ಸಮಿತಿಯ ಬಗ್ಗೆ ಕಳೆದ ಎರಡು ವರ್ಷದಿಂದ ಆಸಕ್ತಿವಹಿಸಿ, ಅಧ್ಯಯನ ಮಾಡಿ, ಪರಿಣಿತರನ್ನು ಕೇಳಿ ಮತ್ತು ರಾಜ್ಯ ಸಭಾ, ಲೋಕಸಭೆಯ ಕಾರ್ಯದರ್ಶಿಯವರನ್ನು ಭೇಟಿಯಾಗಿ ಅವರ ಕಡೆಯಿಂದ ಮಾಹಿತಿಯನ್ನು ತೆಗೆದುಕೊಂಡು ಈ ಸಮಿತಿಗಳನ್ನು ಮಾಡಿದ್ದೇವೆಂದು ನಾನು ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

+ಶ್ರೀ ಡಿ.ಆರ್. ಪಾಟೀಲ್ : ನಮ್ಮ ಕಾನೂನು ಸಚಿವರು ಏಕೋ ವಿಷಯ ಸಮಿತಿಗಳು ರಾಜ್ಯದ ಹೊರಗೆ ಹೋಗುವ ಪ್ರವಾಸವನ್ನು, ರಾಜ್ಯದ ಒಳಗೆ ಹೋಗುವ ಪ್ರವಾಸವನ್ನು ಕಡಿಮೆ ಮಾಡಬೇಕೆಂದು ಇಚ್ಛಿಪಟ್ಟಿದ್ದಾರೆ. ಪರವಾಗಿಲ್ಲ, ಈ ಸರ್ಕಾರಕ್ಕೆ ದುಡ್ಡಿನ ಸಮಸ್ಯೆ ಇದ್ದರೆ, ಈ ದುಡ್ಡನ್ನು ಉಳಿಸುವುದನ್ನು ಎಲ್ಲಾ ಕಡೆಯೂ ಮಾಡಬೇಕು. ನೀವು ಮಂತ್ರಿಗಳು ವಿದೇಶಕ್ಕೆ ಹೋಗುವುದನ್ನು ಕಡಿಮೆ ಮಾಡಿ, ನಾವು ಶಾಸಕರು ಹೊರ ರಾಜ್ಯಗಳಿಗೆ ಹೋಗುವುದನ್ನು ಕಡಿಮೆ ಮಾಡುತ್ತೇವೆ. ಹೊರಗೆ ಹೋಗುವುದರಿಂದ ನಮಗೆ ಹೆಚ್ಚು ಎಕ್ಸ್‌ಪೋಸರ್ ಸಿಗುತ್ತದೆ. ಆ ರಾಜ್ಯದಲ್ಲಿ ಏನೇನು ಕೆಲಸ ಮಾಡುತ್ತಾರೆ ಎನ್ನುವುದನ್ನು ನೋಡಿಕೊಂಡು ಬಂದು ನಮ್ಮ ರಾಜ್ಯದಲ್ಲೂ ನಾವು ಸಲಹೆ ಮಾಡುತ್ತೇವೆ ಎನ್ನುವುದು ಸಾಧ್ಯವಾಗುತ್ತದೆ. ಇದರ ಜೊತೆಗೆ ಏನೋ ಎರಡು-ಮೂರು ಸೈಟ್ ಸೀಯಿಂಗ್ ಮಾಡಿದರೂ ಸಹಿತ ತಪ್ಪು ಎನ್ನುವ ಭಾವನೆ ತಮ್ಮಲ್ಲಿ ಇರಬಾರದು. ದಯವಿಟ್ಟು ನಮ್ಮ ಪ್ರವಾಸಗಳಿಗೆ ರಿಸ್ಟ್ರಿಕ್ಷನ್ ಹಾಕಬೇಡಿ. ಆಮೇಲೆ, ರಾಜ್ಯದ ಒಳಗಂತೂ ಇಲಾಖೆ ಪೂರ್ತಿಯಾಗಿ ಯಾವ ರೀತಿ ಕೆಲಸ ಮಾಡುತ್ತದೆನ್ನುವುದನ್ನು ನಾವು ನೋಡುವುದಕ್ಕೆ ನಮಗೆ ಅವಕಾಶವಿರಬೇಕೆನ್ನುವುದನ್ನು ತಮ್ಮಲ್ಲಿ ಒತ್ತಿ ಹೇಳುತ್ತೇನೆ. ಈಗ ನಾಲ್ಕು ವಾರದ ಸಮಯವನ್ನು ತಾವು ನಿಗದಿ ಮಾಡಿದ್ದೀರಿ. ಇದೇ ವರ್ಷವನ್ನು ತೆಗೆದುಕೊಳ್ಳಿ. ನಾಳೆ ಪಾರ್ಲಿಮೆಂಟ್ ಡಿಸಾಲ್ವ್ ಆಗಿ ಎಲೆಕ್ಷನ್ ಆಯಿತು ಎಂದು ತಿಳಿಯಿರಿ. ಆಗ ನಾಲ್ಕು ವಾರಗಳಲ್ಲಿ ಮಾಡುವುದಕ್ಕೆ ಆಗುತ್ತದೆಯೇ ನಿಮಗೆ? ಅದಕ್ಕೆ ದಯವಿಟ್ಟು ಟೈಮ್ ಎಕ್ಸ್‌ಟೆನ್‌ಷನ್ ಕೇಳಲೇಬಾರದು ಎನ್ನುವಂಥ ರಿಸ್ಟ್ರಿಕ್ಷನ್ ಅನ್ನು ಹಾಕುವುದಕ್ಕೆ ಹೋಗಬೇಡಿ. ಇದು ಪ್ರಾಕ್ಟಿಕಲ್ ಆಗಿ ಆಗುವುದಿಲ್ಲ. ಟೈಮ್ ಹೆಚ್ಚಿಗೆ ಕೊಡುವುದನ್ನು ಅಧ್ಯಕ್ಷರು ವಿವೇಚನೆ ಮಾಡಿ ಕೊಡಲಿ ಅಥವಾ ಕೊಡದೇ ಇರಲಿ. ಆ ವಿವೇಚನೆಯನ್ನು ಅವರಿಗೆ ಬಿಡಿ. ಈ ಎರಡು ರಿಸ್ಟ್ರಿಕ್ಷನ್ ಅನ್ನು ತಾವು ದಯವಿಟ್ಟು ತೆಗೆದರೆ ಒಳ್ಳೆಯದು ಎಂಬುದು ನನ್ನ ಸಲಹೆ.

+ಶ್ರೀ ಆರಗ ಜ್ಞಾನೇಂದ್ರ : ವಿಷಯ ಸಮಿತಿಗಳು ಒಂದು ತಿಂಗಳಿಗೆ ಒಂದೇ ಮೀಟಿಂಗ್ ಸಾಕಾಗುತ್ತದೆ ಎಂದು ಹೇಳಿದ್ದಾರೆ. ಬಹುಶಃ ಒಂದು ವಿಷಯ ಸಮಿತಿಗೆ ಒಂದು ಇಲಾಖೆಯನ್ನು ಅಳವಡಿಸಿದರೆ ಅದು ಸಾಕಾಗುತ್ತದೆ. ಅದು ಹೆಚ್ಚಾಗುವುದಿಲ್ಲ. ಒಂದು ವಿಷಯ ಸಮಿತಿಗೆ ಸುಮಾರು 6-7 ಇಲಾಖೆಗಳನ್ನು ಅಳವಡಿಸಿದಾಗ, ಪ್ರಾಮಾಣಿಕವಾಗಿ ಇದರಲ್ಲಿ ಕೆಲಸ ಮಾಡಬೇಕು, ವಿವರವಾಗಿ ಅಧ್ಯಯನ ಮಾಡಿ ವರದಿ ಕೊಡಬೇಕು, ಅದರ ಬಗ್ಗೆ ಚರ್ಚೆ ನಡೆಯಬೇಕು ಎನ್ನುವುದಾದರೆ ತಿಂಗಳಿಗೆ ಒಂದೇ ಮೀಟಿಂಗ್ ಮಾಡುವುದೂ ಕಷ್ಟವಾಗುತ್ತದೆ. ಒಂದು ಸಕ್ಷನ್‌ನ್ನು ತಾವು ತಂದು ಆಮೇಲೆ ಅದನ್ನು ಹೊಡೆದು ಹಾಕಿದ್ದೀರಿ ಎಂದು ಕಾಣಿಸುತ್ತದೆ.

ಹಳೆಯದು ಇದ್ದಹಾಗೇ ಇವೆ. ಸಬ್ಜೆಕ್ಟ್ ನಂಬರ್ ಮೂರನ್ನು ನೋಡಿ. ಸ್ಟೈಕ್ ಆಗಿದೆ. ಅದು ಸರಿ ಇದೆ. ಆಮೇಲೆ ರಾಜ್ಯದ ಒಳಗಡೆ ಪ್ರವಾಸವನ್ನು ನಿರ್ಬಂಧಿಸಬಾರದು. ಬಹುಶಃ ಇಲ್ಲಿರತಕ್ಕಂಥ, ವಿಷಯ ಸಮಿತಿಗಳಲ್ಲಿ ಕೆಲಸ ಮಾಡುತ್ತಿರತಕ್ಕಂಥ ಶಾಸಕರಲ್ಲಿ ಅನೇಕರು ಹೊಸಬರಿದ್ದೇವೆ, ಕೆಲವರು ಹಳಬರಿದ್ದೇವೆ. ಇಲಾಖೆಯೊಂದು ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವಂಥ ಪೂರ್ಣಪ್ರಜ್ಞೆ ಅವರಿಗೆ ಇಲ್ಲದೇ ಹೋದರೆ, ಸುಮ್ಮನೆ ಅಧಿಕಾರಿಗಳು ಕೊಟ್ಟ ಒಂದು ರಿಕಾರ್ಡಿನ ಆಧಾರದ ಮೇಲೆ ಚರ್ಚೆ ಮಾಡಿ ಒಂದು ವರದಿ ಕೊಟ್ಟರೆ ಅದು ಒಂದು ನಗಣ್ಯವಾಗಿರತಕ್ಕಂಥ ವರದಿಯಾಗುತ್ತದೆಯೇ ವಿನಹ ಅದೊಂದು ಅನುಭವಪೂರ್ಣವಾಗಿರತಕ್ಕಂಥ, ಪರಿಪೂರ್ಣವಾಗಿರತಕ್ಕಂಥ ವರದಿಯಾಗಲು ಸಾಧ್ಯವಿಲ್ಲ. ಕೆಲವು ಸ್ಥಳಗಳಿಗೆ ಹೋಗಿ ಅದನ್ನು ನೋಡಿ, ಯಾವ ರೀತಿ ಇಂಪ್ಲಿಮೆಂಟ್ ಮಾಡಿದ್ದಾರೆ ಎನ್ನುವುದನ್ನು ನೋಡಬಹುದು. ಸಚಿವರುಗಳು ಎಲ್ಲಾ ಇಲಾಖೆಯ ಎಲ್ಲಾ ನುಕ್ ಅಂಡ್ ಕಾರ್ನರ್ ಅನ್ನು ನೋಡಲು ಸಾಧ್ಯವಾಗಲಿಕ್ಕಿಲ್ಲ. ವಿಷಯ ಸಮಿತಿಯವರು ನೋಡುವುದರಿಂದಾಗಿ ಅಧಿಕಾರಿಗಳ ಮೇಲೆ ಒಂದು ಒತ್ತಡ ಇರುವುದರಿಂದ ಮತ್ತು ಅದನ್ನು ಮಾಡಲೇ ಬೇಕು ಎನ್ನುವಂಥದ್ದು ಒಂದು ಅಗ್ರಹಪೂರ್ಣವಾಗಿರುವುದರಿಂದ ಸರ್ಕಾರದ ಈ ಒಂದು ಯಂತ್ರ ಸ್ವಲ್ಪ ಜಾಸ್ತಿ ಗತ್ತಿನಲ್ಲಿ ಚಾಲನೆಯಾಗಲು ಸಾಧ್ಯವಾಗುತ್ತದೇನೋ ಎನ್ನುವಂಥಾದ್ದು ನನ್ನ ಅಭಿಪ್ರಾಯ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೇ, ಈ ವಿಷಯ ಸಮಿತಿಗಳ ರಚನೆ ಹಾಗೂ ಇದರಲ್ಲಿ ಮುಖ್ಯವಾಗಿ ಇರುವಂಥ ಅಂಶ ಎಂದು ಹೇಳಿದರೆ ಕೊನೆಯದೇ. "ಪರಂತು ವಿಷಯ ಸಮಿತಿಗಳು ಹೊರರಾಜ್ಯಗಳಿಗೆ ಅಧ್ಯಯನ ಪ್ರವಾಸದ ಮೇಲೆ ಹೋಗತಕ್ಕದ್ದಲ್ಲ" ಎನ್ನುವುದು, ಅದಕ್ಕೆ ಹೋಗಬೇಕಾಗಿರುವಂಥ ಕಡೆ..

ಉಪಾಧ್ಯಕ್ಷರು : ವಿಷಯ ಪ್ರಸ್ತಾಪ ಮಾಡಿದ್ದಾರೆ. ಶ್ರೀ ವಿ.ಆರ್. ಪಾಟೀಲರು, ಎಲ್ಲರೂ ಹೇಳಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರೇ, ನಾನು ಹೇಳುತ್ತಿದ್ದೇನೆ, ಹೋಗಿರುವಂಥ ಕಡೆ ಈ ಸಮಿತಿಗಳು ಆ ಇಲಾಖೆಯ ಅಧಿಕಾರಿಗಳ ಜೊತೆ, ಹೊರರಾಜ್ಯದ ಮಂತ್ರಿಗಳ ಜೊತೆ ಸೇರಿ ಚರ್ಚೆ ನಡೆಸಿರುವಂಥ ವಿಚಾರಗಳನ್ನು ನಾವು ಈ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಯಾವ ಯಾವ ರಾಜ್ಯಗಳಲ್ಲಿ ಯಾವ ಯಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆ, ಆ ಇಲಾಖೆಯಲ್ಲಿ ಅವರ ಕಾರ್ಯ ವೈಖರಿ ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದರ ಬಗ್ಗೆಯೂ ಸಹ ವರದಿಯಲ್ಲಿ ನಾವು ಒಪ್ಪಿಸಿದ್ದೇವೆ. ಮುಖ್ಯವಾಗಿ ಇವತ್ತು ಸರ್ಕಾರದವರು ಏನು ಹೇಳುತ್ತಿದ್ದಾರೆ ಎಂದರೆ, ಮೊನ್ನೆ ಇದೇ ಸದನದಲ್ಲಿ ನಡೆದಿರುವಂಥ ವಿಚಾರವೆಂದರೆ, ಸದಸ್ಯರ ಮಾಹಿತಿಗಾಗಿ, ಸದಸ್ಯರ ಅನುಭವಕ್ಕಾಗಿ, ಸದಸ್ಯರನ್ನು ನಾವು ಜಪಾನಿಗೆ ಕಳುಹಿಸಿಕೊಡುತ್ತೇವೆ ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಹೇಳುತ್ತಾರೆ, ನಾವು ಸದಸ್ಯರುಗಳನ್ನು ವಿದೇಶಕ್ಕೆ ಕಳುಹಿಸಿಕೊಡುತ್ತೇವೆ, ಅಲ್ಲಿ ಆಗುವಂಥ ವಿಚಾರಗಳನ್ನು ನೋಡಿಕೊಂಡು ಬರುವುದಕ್ಕೆ,

ಅನುಭವ ಪಡೆಯುವುದಕ್ಕಾಗಿ ಎಂದು ಹೇಳುತ್ತಾರೆ. ಆದ್ದರಿಂದ ದಯಮಾಡಿ ಸರ್ಕಾರ ಇದರ ಬಗ್ಗೆ, ಮಂತ್ರಿಗಳೆಲ್ಲಾ ಅನುಭವ ಪಡೆಯುವುದಕ್ಕಾಗಿ ಹೊರದೇಶಗಳಿಗೆ ಹೋಗುವಂಥ ಸಂದರ್ಭದಲ್ಲಿ ಸದಸ್ಯರಿಗೆ ಅನುಭವ ಪಡೆಯುವ ಅವಕಾಶವನ್ನು ತಪ್ಪಿಸುವುದು ಸಮಂಜಸವಾದುದಲ್ಲ ಎನ್ನುವ ಅಭಿಪ್ರಾಯ ನನ್ನದು.

ಉಪಾಧ್ಯಕ್ಷರು : ಒಂದು ನಿಮಿಷ. ವಿಷಯ ಸಮಿತಿಯ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದು ಅಲ್ಲಿಂದ ರಕಮಂಡಾ ಆಗಿ ಬಂದಿರತಕ್ಕಂಥಾದ್ದು. ಇಲ್ಲಿ ಮಾಡಿರತಕ್ಕಂಥಾದುದಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಈ ವಿಷಯ ಸಮಿತಿಗಳನ್ನು ತಾವು ರಚನೆ ಮಾಡಿದ್ದೀರಿ, ಅದರ ಉದ್ದೇಶ ಏನು ಎಂದು ಹೇಳಿದ್ದೀರಿ. ಆ ಉದ್ದೇಶ ಈಡೇರುತ್ತದೆಯೇ ಎನ್ನತಕ್ಕಂಥಾದ್ದು ಪ್ರಶ್ನೆ. ವಿಷಯ ಸಮಿತಿಯವರು ಎಷ್ಟು ವರದಿಯನ್ನು ಕೊಟ್ಟಿದ್ದಾರೆ, ಆ ವರದಿಯನ್ನು ಏನು ತಾವು ಸ್ಟಡಿ ಮಾಡುತ್ತೀರಿ, ಅದಕ್ಕೆ ಉತ್ತರ ಕೊಡುತ್ತೀರಿ, ಅದರ ಬಗ್ಗೆ ಏನು ಚಿಂತನೆ ಮಾಡುತ್ತೀರಿ? ಏನಾದರೂ ಚಿಂತನೆ ಮಾಡಿದ್ದರೆ, ಆ ವರದಿಯ ಆಧಾರದ ಮೇಲೆ ತಾವು ಏನಾದರೂ ಕ್ರಮ ಕೈಗೊಳ್ಳುವುದಿದ್ದರೆ ನೀವು ಹೇಳುವುದು ಸರಿ. ಇಲ್ಲದಿದ್ದರೆ ಅದಕ್ಕೆ ಏನೂ ಬೆಲೆಯಿಲ್ಲ. ಏಕೆಂದರೆ ನಾನು ಆರೋಗ್ಯ ವಿಷಯ ಸಮಿತಿಯ ಸದಸ್ಯನಾಗಿದ್ದೆ. ಸನ್ಮಾನ್ಯ ತಂಗಾರವರು ಅಧ್ಯಕ್ಷರಾಗಿದ್ದರು. ನಾವು ವೆಸ್ಟ ಬೆಂಗಾಲಗೆ ಹೋಗಿದ್ದೆವು. ಬಹಳಷ್ಟು ಆಸ್ಪತ್ರೆಗಳಿಗೆ ಭೇಟಿ ಕೊಟ್ಟು, ಅಲ್ಲಿಯ ವ್ಯವಸ್ಥೆಗಳು, ನಮ್ಮ ವ್ಯವಸ್ಥೆಗಳು, ಅಲ್ಲಿಯ ಜಿಲ್ಲಾ ಪಂಚಾಯಿತಿಗಳ ವ್ಯವಸ್ಥೆ, ನಮ್ಮ ಜಿಲ್ಲಾ ಪಂಚಾಯಿತಿ ವ್ಯವಸ್ಥೆ, ಆರೋಗ್ಯ ಇಲಾಖೆ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎನ್ನತಕ್ಕಂಥ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಅದೇನೇ ರಿಪೋರ್ಟ್ ಬಂದರೂ ಸಹ ಆ ರಿಪೋರ್ಟಿಗೆ ಏನೂ ಬೆಲೆ ಕೊಡದೇ ಇರುವುದಾದರೆ ಇವುಗಳ ಅವಶ್ಯಕತೆ ಏನೂ ಇರುವುದಿಲ್ಲ. ತಾವು ಏನೇ ತೀರ್ಮಾನ ತೆಗೆದುಕೊಂಡರೂ ನಾವು ಅದಕ್ಕೆ ಬದ್ಧರು. ಅದಕ್ಕೇನೂ ಎರಡು ಮಾತಿಲ್ಲ. ತಾವು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ, ಏನು ವರದಿಗಳು ಬರುತ್ತವೆ, ಅದರ ಮೇಲೆ ಸರ್ಕಾರ ಯಾವ ರೀತಿ ಪರಿಣಾಮ ಬೀರುತ್ತದೆ, ಅದಕ್ಕೆ ಯಾವ ರೀತಿ ಬೆಲೆ ಕೊಡುತ್ತದೆ ಅನ್ನತಕ್ಕಂಥಾದ್ದನ್ನು ತಾವು ಚಿಂತನೆ ಮಾಡಬೇಕಾಗಿದೆ. ಈ ಬಗ್ಗೆ ಕೊನೆಯ ನಿರ್ಧಾರ ತಮ್ಮದೇ ಎಂದು ಹೇಳುತ್ತೇನೆ.

+ ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಕೆಲವು ಸದಸ್ಯರು ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಅನುಭವದ ಆಧಾರದ ಮೇಲೆ ನಾವು ಈ ತೀರ್ಮಾನವನ್ನು ತಗದುಕೊಳ್ಳಬೇಕಾಗಿರತಕ್ಕಂಥ ಅನಿವಾರ್ಯ ಪರಿಸ್ಥಿತಿ ಬಂದಿರತಕ್ಕಂಥಾದ್ದನ್ನು, ಲೇಮಾನ್ ಕೌಜಲಗಿಯವರು ಹಿಂದೆ ಸಭಾಧ್ಯಕ್ಷರು ಆಗಿದ್ದಾಗ ಅವರ ಕಾಲದಲ್ಲಿ ನಾವು ಇವನ್ನು ಮಂಡಿಸಿ ಇದಕ್ಕೆ ಒಪ್ಪಿಗೆಯನ್ನು ಪಡೆದಿರತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಮುಂದಿನ ವರ್ಷದ ಅನುಭವವನ್ನೂ ನೋಡೋಣ. ಅದು ತಪ್ಪೇನೂ ಅಲ್ಲ. ಅನುಭವದ ಹಿನ್ನೆಲೆಯಲ್ಲಿ

ನಿಯಮಾವಳಿಗಳಿಗೆ ನಾವೇ ತಿದ್ದುಪಡಿಯನ್ನು ತರುವಂಥ ಸಂಪೂರ್ಣ ಅಧಿಕಾರ ನಮಗೆ ಇದೆ. ಆದರೆ ಇಲ್ಲಿ ಯಾವುದೇ ಸದಸ್ಯರು ಇಲ್ಲಿ ಕೆಲಸ ಮಾಡುತ್ತಿರಕತಕ್ಕಂಥ ಸಂದರ್ಭದಲ್ಲಿ ಅವರ ಹಕ್ಕನ್ನು ಮೊಟಕು ಮಾಡುವಂಥ ಪ್ರಶ್ನೆ ಇಲ್ಲವೇ ಇಲ್ಲ. ಅದರಲ್ಲೂ ವಿಷಯ ಸಮಿತಿಗೆ ಸಂಬಂಧಪಟ್ಟಂತೆ ರಾಜ್ಯದ ಒಳಗಡೆ ಹೋಗಿ ಆಯಾ ಇಲಾಖೆಗೆ ಸಂಬಂಧಪಟ್ಟಿರತಕ್ಕ ಕೆಲಸಗಳು ಯಾವ ಭಾಗದಲ್ಲಿ ಏನು ನಡದಿದೆ? ಬಜೆಟ್ಟಿನಲ್ಲಿ ಕೂಟ್ಟಿರತಕ್ಕ ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆ, ಎಲ್ಲಾದರೂ ಹಣವನ್ನು ಉಳಿಕೆ ಮಾಡಲಾಗಿದೆಯೇ, ಆ ಹಣವನ್ನು ಖರ್ಚು ಮಾಡುತ್ತಿರುವಂಥಾದ್ದಕ್ಕೆ ನಮ್ಮ ಚಿಂತನೆ ಏನು ಎಂದು ಹೇಳುತ್ತಿರುವಂಥಾದ್ದನ್ನು ನೋಡಲು ಖಂಡಿತವಾಗಿ ಅಧಿಕಾರ ಇದೆ. ಆದರೆ ಆ ಕೆಲಸವನ್ನು ಮಾಡುವಾಗ ಅಧ್ಯಕ್ಷರಿಂದ ಮತ್ತು ಛೇರಮೆನ್‌ರಿಂದ ಅಧಿಕಾರವನ್ನು ತೆಗೆದುಕೊಂಡು ಹೋಗಿ ಎನ್ನುವಂಥ ಚಿಂತನೆ ನಿಯಮದ ಅಡಿ ಇದೆ. ಅದನ್ನು ಈಗಾಗಲೇ ನಾವು ಪ್ರಸ್ತಾಪ ಮಾಡಿದ್ದೇವೆ. ಆದ್ದರಿಂದ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿತವಾಗಿರತಕ್ಕಂಥ ಈ ಒಂದು ಸಮಿತಿಯ ವರದಿ. ಅವರೇ ಇದನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಆದ್ದರಿಂದ ಮಾನ್ಯ ತಿಮ್ಮಪ್ಪನವರೇ, ಒಂದು ವರ್ಷ ನಾವು ನೋಡೋಣ. ನಿಮ್ಮ ಅನುಭವ ನಮ್ಮ ಅನುಭವ ಎಲ್ಲರ ಅನುಭವವೂ ಒಟ್ಟಾರೆ ಸೇರಿ ಮುಂದೆ ಇದಕ್ಕೆ ಏನಾದರೂ ಮಾಡಬೇಕು ಎಂದು ಕಂಡು ಬಂದರೆ ಆಗ ನಾವು ಚಿಂತನೆ ಮಾಡೋಣ. ಈಗ ಇದಕ್ಕೆ ಅಂಗೀಕಾರವನ್ನು ಕೊಡಿ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್. ಈಗ ತಾವು ಮೂರನೇ ಪ್ಯಾರಾದಲ್ಲಿ ಹೊಡೆದು ಹಾಕಿದ್ದೀರಿ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆಗಿತ್ತು, ಕನಿಷ್ಠ ಎರಡು ಸಲವಾದರೂ ಸೇರಬಹುದು ಎಂದು ಹೇಳಿ ಒಂದು ಕಾನ್‌ಸೆನ್ಸ್‌ನೆಸ್ ಒಪಿನಿಯನ್ ಇತ್ತು. ಈಗ ಅದನ್ನು ಇಲ್ಲಿ ತೆಗೆದುಹಾಕಿ ಬಿಟ್ಟಿದ್ದೀರಲ್ಲಾ ಏಕೆ?

SRI M.C. NANAIAH : That is subject to the inherent powers of the Speaker. ಸ್ಪೀಕರ್‌ಗೆ ಇರತಕ್ಕಂಥ ಜವಾಬ್ದಾರಿ ಕುರಿತು, ಅದರಲ್ಲಿ ಎಷ್ಟು ಬೇಕಾದರೂ ಆ ಸಂದರ್ಭದಲ್ಲಿ ತಮಗೆ ಅನುಮತಿ ಕೊಡುವಂಥ ಅಧಿಕಾರ ಉಂಟು. ಆದ್ದರಿಂದ ಸ್ಪೀಕರ್‌ಗೆ ಕೆಲವು ರೆಸಿಡ್ಯೂಯರಿ ಪವರ್ಸ್ ಯಾವುದಿದೆ, ಅದನ್ನು ಮೊಟಕು ಮಾಡಬಾರದು ಎನ್ನುವಂಥ ಹಿನ್ನಲೆಯಲ್ಲಿ ಇದನ್ನು ತಂದಿರತಕ್ಕಂಥಾದ್ದು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಅಧ್ಯಕ್ಷರು ಮತ್ತು ಸಭಾಪತಿಗಳಿಂದ ಅಧಿಕಾರ ಪಡೆಯಬೇಕು ಎಂದು ತಾವು ಇದರಲ್ಲಿ ಹೇಳಿದ್ದೀರಿ. ಏಕೆಂದರೆ ನಾನೂ ಒಂದು ವಿಷಯ ಸಮಿತಿಯಲ್ಲಿ ಕುಳಿತು ಚರ್ಚೆ ಮಾಡಿದ್ದೇನೆ. ನಾನು ಪ್ರಾರಂಭದಲ್ಲೇ ಹೇಳಿದೆ. ಈ ವಿಷಯ ಸಮಿತಿಗಳು ಚರ್ಚೆ ಮಾಡತಕ್ಕಂಥ ಸ್ವರೂಪ ಇದಲ್ಲ ಎಂದು. ಇದ್ಯಾವುದೂ ಶಾಸಕಾಂಗದ ಸಮಿತಿಯ ವಿಚಾರ ಅಲ್ಲ. ಅವುಗಳನ್ನು ಚರ್ಚೆ ಮಾಡುವ ರೀತಿಯಲ್ಲಿ ಇದನ್ನು ಕಂಡಕ್ಟ್ ಮಾಡುತ್ತಿದ್ದೀರಿ. ಅದು ಸರಿಯಲ್ಲ. ನೀವು ಒಂದು ಸಾರಿ ಕುಳಿತರೆ, ಒಂದು ದಿವಸ

ಆಗಬಹುದು, ಎರಡು ದಿವಸ ಆಗಬಹುದು, ಮೂರು ದಿವಸ ಆಗಬಹುದು. ಚರ್ಚೆ ಪ್ರಾರಂಭ ಮಾಡಿದ ಮೇಲೆ ಚರ್ಚೆ ಪೂರ್ಣ ಆಗುವವರೆಗೂ ಕುಳಿತುಕೊಳ್ಳಬೇಕು. ಒಬ್ಬರದು ಆದಮೇಲೆ ಇನ್ನೊಬ್ಬರು ಮಾಡುತ್ತಾರೆ. ಮತ್ತು ಲೆಜಿಸ್ಲೇಟರ್ಸ್ ಏನಿದ್ದಾರೆ, ಅವರೂ ಕೂಡ ಪ್ರಾಪರ್ ಆಗಿ ಅದನ್ನು ಪ್ರೊಜೆಕ್ಟ್ ಮಾಡಬೇಕು, ವಿಷಯ ಸಮಿತಿ ನಡೆಯಬೇಕಾದಂಥ ರೀತಿ ನೀತಿಗೂ ಬೇರೆ ರೀತಿ ನೀತಿಗೆ ವ್ಯತ್ಯಾಸ ಇದೆ. ಇಲ್ಲಿ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ನೀವು ನಮಗೆ ವಿವರಿಸಿ ಹೇಳಲಿಲ್ಲ. ಹಾಗಾಗಿ ಏನಾಗಿದೆ ಎಂದರೆ ಬೇರೆ ಶಾಸಕಾಂಗದ ಸಮಿತಿಯು ಹೇಗೆ ಕೆಲಸ ಮಾಡುತ್ತವೆ, ಆಡಿಟ್ ರಿಪೋರ್ಟ್‌ನ್ನು ಇಟ್ಟುಕೊಂಡು ಅವುಗಳ ಮೇಲೆ ಚರ್ಚೆ ಮಾಡಿದ ಹಾಗೆ, ಇವತ್ತು ಒಂದು ಕಡತವನ್ನು ಇಟ್ಟುಕೊಳ್ಳುವುದು, ಅದನ್ನು ನೋಡುವುದು, ಅದರ ಮೇಲೆ ಮಾಡುವುದು ಆಗಿದೆ. ಮತ್ತೊಂದು ವಿಚಾರ ಹೇಳುತ್ತೇನೆ, ಯಾವುದೋ ಒಂದು ರೆಕಾರ್ಡ ಇಟ್ಟುಕೊಳ್ಳವುದು, ಇದಲ್ಲ. ದಯವಿಟ್ಟು ನೀವೂ ಕೂಡ ನಮ್ಮ ಈ ವಿಷಯ ಸಮಿತಿಗಳಿಗೆ ಚರ್ಚೆ ಮಾಡತಕ್ಕಂಥ ವಿಧಾನವನ್ನು, ಹೇಗೆ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾದರೆ ಆ ಚರ್ಚೆ ಪೂರ್ಣವಾಗುವವರೆಗೆ, ಆ ಬೇಡಿಕೆ ಪೂರ್ಣವಾಗುವವರೆಗೆ, ಮಂಜೂರಾತಿ ಪಡೆಯುವವರೆಗೆ ಚರ್ಚೆ ಇರುತ್ತದೆಯೋ ಆ ರೀತಿ ಅಲ್ಲಿಯೂ ಮಾಡುವುದಕ್ಕೆ ನೀವು ಸ್ವಲ್ಪ ಮಾರ್ಗಸೂಚಿಗಳನ್ನು ಕೂಡಬೇಕು. ಆಗ ಮಾತ್ರ ಇದು ಯಶಸ್ವಿಯಾಗುತ್ತದೆ.

ಪ್ರಸ್ತಾವದ ಅಂಗೀಕಾರ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವರದಿಗೆ ಒಪ್ಪಿಗೆ ನೀಡಲಾಯಿತು.

10.30 ಎ.ಎಂ.

ಉಪಾಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ತುಂಗ ಭದ್ರಾ ಎಡದಂಡೆ ಕಾಲುವೆಯಿಂದ 15ನೇ ಏಪ್ರಿಲ್ 1996ರವರೆಗೆ ನೀರು ಬಿಡುವ ಬಗ್ಗೆ.

+ಶ್ರೀ ಶ್ರೀರಂಗ ದೇವರಾಯಲು (ಗಂಗಾವತಿ) : ಮಾನ್ಯ ಅಧ್ಯಕ್ಷರೇ, ನಾನು ತುಂಗಭದ್ರಾ ಎಡದಂಡಾ ಕಾಲುವೆಯ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ. ರೈತರ ಒಂದು ಕಳಕಳಿಯಿಂದ ನಾನು ಈ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುವುದೆನೆಂದರೆ, 31ನೇ ಮಾರ್ಚ್ 1996 ರಿಂದ ತುಂಗಾಭದ್ರಾ ಎಡ-ದಂಡೆ ಕಾಲುವೆಗೆ ನೀರು ಬಿಡುವುದನ್ನು ನಿಲ್ಲಿಸಬೇಕೆಂದು ಗೌರ್ನಮೆಂಟ್